**ಕರ್ನಾಟಕ ಸರಕಾರ**

ಸಂ:ಬಿಜಿಎಂ:ಡಿಯುಡಿಸಿ:ಯುಪಿಎಸಿ:ಸಿಆರ್:1:2012-13

ಜಿಲ್ಲಾಧಿಕಾರಿಗಳ ಕಾರ್ಯಾಲಯ,
ನಗರ ಬಡತನ ನಿರ್ಮೂಲನಾ ಕೋಶ,
ಬೆಳಗಾವಿ. ದಿನಾಂಕ:30.05.2012.

**ವಿಷಯ:** ನಗರಸಭೆ ನಿಪ್ಪಾಣಿ ವ್ಯಾಪ್ತಿಯಲ್ಲಿ 2012-13ನೇ ಸಾಲಿನ ನಗರಸಭೆ ಆದಾಯದಡಿ ಶೇ.7.25 ಮತ್ತು ಶೇ.3ರಡಿ ತೆಗೆದುಕೊಂಡ ಕಾರ್ಯಕ್ರಮ/ಕಾಮಗಾರಿಗಳ ಕ್ರಿಯಾ ಯೋಜನೆ ಅನುಮೋದನೆ ಕುರಿತು.

**ಓದಿತು:**-1)ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ:415:ಜಿಇಎಲ್:2011 ದಿನಾಂಕ:27.02.2012

2)ಆಯುಕ್ತರು, ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ಸುತ್ತೋಲೆಸಂ:ಪೌನಿ:22.75:ಸುತ್ತೋಲೆ:2:2012-13 ದಿನಾಂಕ:24.04.2012

3)ಪೌರಾಯುಕ್ತರು, ನಗರಸಭೆ ನಿಪ್ಪಾಣಿ ಇವರ ಪತ್ರ ಸಂಖ್ಯೆ: ನಸನಿ:ಶೇ. 22.75:ಸಿಆರ್:2:2012-13 ದಿನಾಂಕ:10.05.2012

**ಪ್ರಸ್ತಾವನೆ:**

2012-13ನೇ ಸಾಲಿಗೆ ನಿಪ್ಪಾಣಿ ನಗರಸಭೆಯು ಸರ್ಕಾರದ ಸುತ್ತೋಲೆಯ ಮಾರ್ಗಸೂಚಿಗಳನ್ವಯ ಬಾಬ್ತುಗಳನ್ನು ಹೊರತುಪಡಿಸಿ ರೂ.264.70 ಲಕ್ಷಗಳ ಆದಾಯವನ್ನು ಹೊಂದಿರುತ್ತದೆ. ಅದರಂತೆ ಓದಿತು (3)ರನ್ವಯ ಪೌರಾಯುಕ್ತರು, ನಗರಸಭೆ ನಿಪ್ಪಾಣಿ ಇವರು ನಗರಸಭೆ ಆದಾಯದಲ್ಲಿ ಶೇ.7.25ರಷ್ಟು ನಗರದ ಇತರೆ ಬಡ ಜನರ ಕಲ್ಯಾಣ ಕಾರ್ಯಕ್ರಮಗಳಿಗೆ ರೂ.19.19 ಲಕ್ಷಗಳಲ್ಲಿ 06 ಕಾರ್ಯಕ್ರಮಗಳಿಗೆ ಹಾಗೂ ಶೇ.3%ರಷ್ಟು ವಿಕಲಚೇತನರ ಕಲ್ಯಾಣ ಕಾರ್ಯಕ್ರಮಗಳಿಗಾಗಿ ರೂ.7.94 ಲಕ್ಷಗಳಲ್ಲಿ 05 ಕಾರ್ಯಕ್ರಮಗಳಿಗೆ ಕ್ರಿಯಾ ಯೋಜನೆ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ. ಅದರಂತೆ ಓದಿತು (1)ರ ಸರ್ಕಾರದ ಸುತ್ತೋಲೆ ಮಾರ್ಗಸೂಚಿಯಂತೆ ಪರಿಶೀಲಿಸಲಾಗಿ, ಶೇ.7.25ರಷ್ಟು ನಗರದ ಇತರೆ ಬಡಜನರ ಕಲ್ಯಾಣ ನಿಧಿಗೆ ರೂ.19.19 ಲಕ್ಷಗಳಲ್ಲಿ 06 ಕಾರ್ಯಕ್ರಮಗಳಿಗೆ ಹಾಗೂ ಶೇ.3ರಷ್ಟು ವಿಕಲಚೇತನರ ಕಲ್ಯಾಣ ಕಾರ್ಯಕ್ರಮಗಳಿಗಾಗಿ ರೂ.7.94 ಲಕ್ಷಗಳಲ್ಲಿ 05 ಕಾರ್ಯಕ್ರಮಗಳಿಗೆ ಕ್ರಿಯಾ ಯೋಜನೆ ಅನುಮೋದನೆಗೆ ಪ್ರಸ್ತಾಪಿಸಿದ್ದನ್ನು ಪರಿಗಣಿಸಲಾಗಿದೆ.

| ಕ್ರ.ಸಂ | ಕಾರ್ಯಕ್ರಮಗಳ ಹೆಸರು | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| *1* | *2* | *3* |
| | **ಶೇ.7.25ರ ಇತರೆ ಬಡಜನರ ಕಲ್ಯಾಣ ಕಾರ್ಯಕ್ರಮ/ಕಾಮಗಾರಿಗಳು** | |
| | **ವ್ಯಕ್ತಿ ಸಂಬಧಿತ ಅನುಕೂಲತೆಗಳು** | |
| 1 | ವೈಯಕ್ತಿಕ ಶೌಚಾಲಯ ನಿರ್ಮಾಣಕ್ಕಾಗಿ ಸಹಾಯಧನ ನೀಡುವುದು | 7.00 |
| 2 | ಅಡುಗೆ ಅನಿಲ ಸಂಪರ್ಕ ಒದಗಿಸುವುದು. | 1.67 |

| | | |
|---|---|---|
| | **ಶಿಕ್ಷಣ** | |
| 3 | ವಿವಿಧ ಹಂತದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿಶೇಷ ಆರ್ಥಿಕ ನೆರವು ನೀಡುವುದು. | 1.00 |
| | **ಉದ್ಯೋಗ** | |
| 4 | ಎಸ್.ಜೆ.ಎಸ್.ಆರ್.ವೈ ಯೋಜನೆಯಡಿ ಫಲಾನುಭವಿಗಳಿಗೆ ಸಾಲ ಮರುಪಾವತಿಗಾಗಿ ಸಹಾಯಧನ ನೀಡುವುದು. | 1.10 |
| | **ಸಮುದಾಯ ಸಂಬಂಧಿತ ಅನುಕೂಲತೆಗಳು** | |
| 5 | ವಾರ್ಡ ನಂ.18ರಲ್ಲಿ ಜಿಜಾಮಾತಾ ಚೌಕದಿಂದ ಥಳೋಬಾ ಪೇಠ ಪಾಟಕರ ಗಲ್ಲಿಯವರೆಗೆ ರಸ್ತೆ ಡಾಂಬರೀಕರಣ ಮಾಡುವುದು. | 4.00 |
| 6 | ವಾರ್ಡ ನಂ.26ರಲ್ಲಿ ಬಿರೋಬಾ ಮಾಳದಲ್ಲಿ ಪ್ರಮೋದ ಶೆಡಗೆ ಅವರ ಮನೆಯಿಂದ ಪ್ರಕಾಶ ತಾರಳೆ ಅವರ ಮನೆ ಮತ್ತು ಅನೀಲ ಶೆಟಕೆ ಅವರ ಮನೆಯವರೆಗೆ ರಸ್ತೆ ಡಾಂಬರೀಕರಣ ಮಾಡುವುದು. | 4.42 |
| | **ಒಟ್ಟು** | **19.19** |
| | **ಶೇ.3ರ ವಿಕಲಚೇತನರ ಕಲ್ಯಾಣ ಕಾರ್ಯಕ್ರಮಗಳು** | |
| | **ವ್ಯಕ್ತಿ ಸಂಬಧಿತ ಅನುಕೂಲತೆಗಳು** | |
| 1 | ಅಡುಗೆ ಅನಿಲ ಸಂಪರ್ಕ ಒದಗಿಸುವುದು. | 1.00 |
| 2 | ವೈಯಕ್ತಿಕ ಶೌಚಾಲಯ ನಿರ್ಮಾಣಕ್ಕಾಗಿ ಸಹಾಯಧನ ನೀಡುವದು. | 1.80 |
| 3 | ಕುಡಿಯುವ ನೀರಿನ ಸಂಪರ್ಕ ವೆಚ್ಚ ಭರಿಸುವುದು. | 0.38 |
| | **ಸಮುದಾಯ ಸಂಬಂಧಿತ ಅನುಕೂಲತೆಗಳು** | |
| 4 | ಜಿಲ್ಲಾ ಅಂಧತ್ವ ನಿಯಂತ್ರಣ ಸಂಸ್ಥೆಯ ನೆರವಿನೊಂದಿಗೆ ನಡೆಯುವ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆ ಶಿಬಿರ ಮತ್ತು ಆರೋಗ್ಯ ತಪಾಸಣಾ ಶಿಬಿರಗಳನ್ನು ಏರ್ಪಡಿಸಲು ಆರ್ಥಿಕ ನೆರವು ನೀಡುವದು. | 1.00 |
| 5 | ನಿಪ್ಪಾಣಿ ನಗರ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಕಛೇರಿ, ಸಮುದಾಯ ಭವನ ಮತ್ತು ಸಾರ್ವಜನಿಕ ಕಟ್ಟಡಗಳಿಗೆ ಇಳಿಜಾರು ಹಾದಿ ನಿರ್ಮಾಣ ಮಾಡುವುದು. | 3.76 |
| | **ಒಟ್ಟು** | **7.94** |

**ಆದೇಶ**

ಮೇಲಿನ ಪ್ರಸ್ತಾವನೆಯಂತೆ ನಗರಸಭೆ ನಿಪ್ಪಾಣಿ ವ್ಯಾಪ್ತಿಯಲ್ಲಿ 2012–13ನೇ ಸಾಲಿನ ನಗರಸಭೆ ಆದಾಯದಡಿ ಶೇ.7.25ರಷ್ಟು ನಗರದ ಇತರೆ ಬಡ ಜನರ ಕಲ್ಯಾಣ ಯೋಜನೆಯಡಿ ರೂ.19.19 ಲಕ್ಷಗಳಲ್ಲಿ 06 ಕಾರ್ಯಕ್ರಮಗಳಿಗೆ ಹಾಗೂ ಶೇ.3%ರಷ್ಟು ವಿಕಲಚೇತನರ ಕಲ್ಯಾಣ ಯೋಜನೆಯಡಿ ರೂ.7.94 ಲಕ್ಷಗಳಲ್ಲಿ 05 ಕಾರ್ಯಕ್ರಮಗಳನ್ನು ಕೈಕೊಳ್ಳಲು ಕ್ರಿಯಾಯೋಜನೆ ಅನುಮೋದನೆ ನೀಡಿ ಓದಿತು (1) ಹಾಗೂ (2)ರ ಸರ್ಕಾರದ ಸುತ್ತೋಲೆಯ ನಿಬಂಧನೆ ಹಾಗೂ ಷರತ್ತುಗಳಿಗೆ ಅನುಗುಣವಾಗಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಆದೇಶಿಸಿದೆ.

**ಸಹಿ/–**

**(ವಿ. ಅನ್ಬುಕುಮಾರ)**

ಜಿಲ್ಲಾಧಿಕಾರಿಗಳು, ಬೆಳಗಾವಿ

**ಪ್ರತಿ:**ಗೌರವಾದರಗಳೊಂದಿಗೆ, ಆಯುಕ್ತರು ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಾದರಪಡಿಸಿದೆ.

**ಪ್ರತಿ:**ಕಾರ್ಯಪಾಲಕ ಅಭಿಯಂತರರು/ ಸಹಾಯಕ ಕಾರ್ಯಪಾಲಕ ಅಭಿಯಂತರರು ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ ಬೆಳಗಾವಿ.

**ಪ್ರತಿ:**ಪೌರಾಯುಕ್ತರು, ನಗರಸಭೆ ನಿಪ್ಪಾಣಿ ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

**ಸಹಿ/-**

ಯೋಜನಾ ನಿರ್ದೇಶಕರು
ಜಿಲ್ಲಾ ನಗರಾಭಿವೃದ್ಧಿ ಕೋಶ,
ಜಿಲ್ಲಾಧಿಕಾರಿಗಳ ಕಾರ್ಯಾಲಯ ಬೆಳಗಾವಿ